**ಕರ್ನಾಟಕ ಅರಣ್ಯ ಇಲಾಖೆ**

ಸಂಖ್ಯೆ:ಎ7/ಎಲ್ಎನ್‌ಡಿ/ಎಫ್‌ಸಿ/TRANS Line/ಬಿಜಿಎಂ/ಸಿಆರ್– /19–20

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ:03 –01–2020

ಇವರಿಗೆ,

ಉಪ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವಿಭಾಗ,
ಬೆಳಗಾವಿ.

ವಿಷಯ: Diversion of 177.091 ha of forest land in Kali Tiger Reserve, Dharawad, Haliyal and Belgaum Divisions for 400 KV Transmission Line LILO Project in favour of Manager (Projects), Goa-Tamnar Transmission Project Ltd., New Delhi-reg.

ಉಲ್ಲೇಖ: ನಿಮ್ಮ ಕಚೇರಿ ಪತ್ರ ಸಂಖ್ಯೆ: ಡಿ1/ಭೂಮಿ/ಟ್ರಾನ್ಸ್‌ಮಿಷನ್–ಲೈನ್/ಸಿಆರ್–/2018–19/3901 ದಿನಾಂಕ: 02–01–2020.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಡಿ ಮೇ॥ Manager (Projects), Goa-Tamnar Transmission Project Ltd., Dharawad ಇವರಿಗೆ ಬೆಳಗಾವಿ ವಿಭಾಗ ಅರಣ್ಯ ಪ್ರದೇಶದಲ್ಲಿ 400 ಕೆ.ವಿ. ಟ್ರಾನ್ಸ್‌ಮಿಷನ್ ಲೈನ್ ಅಳವಡಿಸಲು 101.747 ಹೆ. ಅರಣ್ಯ ಪ್ರದೇಶವನ್ನು ಹಂಚಿಕೆ ಮಾಡುವ ಕುರಿತು ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರಡಿಯಲ್ಲಿ ಸಲ್ಲಿಸಲಾದ ಪ್ರಸ್ತಾವನೆಯನ್ನು ಪರಿಶೀಲಿಸಿ ನೋಡಲಾಗಿ ಈ ಕೆಳಗಿನಂತೆ ನ್ಯೂನ್ಯತೆಗಳು ಕಂಡು ಬಂದಿರುತ್ತವೆ.

1) ಹಂಚಿಕೆಯಾಗುತ್ತಿರುವ ಅರಣ್ಯ ಪ್ರದೇಶವು ಅನುಮೋದಿತ ಕಾರ್ಯಯೋಜನೆಯ ಪ್ರಕಾರ ಯಾವ ವರ್ಕಿಂಗ್ ಸ್ಕಿಮ್‌ನಲ್ಲಿ ಬರುತ್ತದೆ ಎಂಬುದರ ಬಗ್ಗೆ ಶರಾ ನಮೂದಿಸಿರುವುದಿಲ್ಲ.
2) ಸದರಿ ಅರಣ್ಯ ಪ್ರದೇಶವು ನಾಗರಗಾಳಿ, ಗೋಲಿಹಳ್ಳಿ, ಲೋಂಡಾ ಮತ್ತು ಖಾನಾಪೂರ ವಲಯದ ವ್ಯಾಪ್ತಿಯಡಿ ಬರುತ್ತಿದ್ದು, ಅಲ್ಲದೇ ಸದರಿ ಅರಣ್ಯ ಪ್ರದೇಶ ಪಶ್ಚಿಮ ಘಟ್ಟ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಬರುತ್ತಿದ್ದು, ಆದರೆ ನೀವು ಯಾವುದೇ ರೀತಿಯ ಅಳುವಿನ ಅಂಚಿನಲ್ಲಿರುವ ಸಸ್ಯ ಪ್ರಬೇದಗಳು, ಪ್ರಾಣಿಗಳು ಬರುವುದಿಲ್ಲವೆಂದು ಶರಾ ನಮೂದಿಸಿರುತ್ತೀರಿ. ಈ ಬಗ್ಗೆ ಪರಿಶೀಲಿಸಿದ್ದು ಕಂಡುಬರುವುದಿಲ್ಲ.
3) ಅರಣ್ಯ ಪ್ರದೇಶವನ್ನು ಹಂಚಿಕೆ ಮಾಡುವ ಬಗ್ಗೆ ಶಿಫಾರಸ್ಸು ಪತ್ರ ಸಲ್ಲಿಸಿದ್ದು ಇರುವುದಿಲ್ಲ.
4) ಬೆಳಗಾವಿ ವಿಭಾಗದ ವ್ಯಾಪ್ತಿಯಡಿ ಭೀಮಗಡ ವನ್ಯಧಾಮ ವಲಯವಿದ್ದು, ಸದರಿ ಅರಣ್ಯ ಪ್ರದೇಶವು ಅದರ ಪರಿಸರ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಶರಾ ನಮೂದಿಸಿರುತ್ತೀರಿ. ಈ ಬಗ್ಗೆ ಪರಿಶೀಲಿಸಿದ್ದು ಕಂಡುಬರುವುದಿಲ್ಲ.
5) ಅರಣ್ಯ (ಸಂರಕ್ಷಣೆ) ಕಾಯ್ದೆ 1980 ರ ಪ್ರಕಾರ ಉಪಯೋಗಿ ಸಂಸ್ಥೆಯವರು ಉಲ್ಲಂಘಣೆ ಮಾಡದೇ ಇರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಇರುವುದಿಲ್ಲ.
6) ಸದರಿ ಅರಣ್ಯ ಪ್ರದೇಶದಲ್ಲಿ ಯಾವುದೇ ಪಾರಂಪರಿಕ ಕಟ್ಟಡ, ಪ್ರವಾಸಿ ತಾಣ, ರಾಷ್ಟ್ರೀಯ ಉದ್ಯಾನವನ, ಹುಲಿ ಸಂರಕ್ಷಣೆ, ಆನೆ ಕಾರಿಡಾರ್ ಹಾಯ್ದು ಹೋಗದೇ ಇರುವ ಬಗ್ಗೆ ಪ್ರಮಾಣ ಪತ್ರ ನೀಡಿದ್ದು ಇರುವುದಿಲ್ಲ.

ಕಾರಣ, ಮೇಲಿನಂತೆ ಎಲ್ಲಾ ನ್ಯೂನ್ಯತೆಗಳನ್ನು ಸರಿಪಡಿಸಿ, ಅಗತ್ಯ ದಾಖಲಾತಿಗಳೊಂದಿಗೆ ನಿಮ್ಮ ಸ್ಪಷ್ಟ ಅಭಿಪ್ರಾಯದೊಂದಿಗೆ ವರದಿ ಸಲ್ಲಿಸಲು ತಿಳಿಸಿದೆ.

ಬಿಗಿಟ್ಟು:- ತಾ।। ಪ್ರಿಪ್ರಕರ.-ಸ.

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
ಬೆಳಗಾವಿ ವೃತ್ತ, ಬೆಳಗಾವಿ